‘ಧಾರ್ಮಿಕ ಕೃತಿಗಳ ಶಾಸ್ತ್ರ’ ಗ್ರಂಥಮಾಲಿಕೆ : ಶ್ರಾದ್ಧ - ಖಂಡ ೧

# ಶ್ರಾದ್ಧದ ಮಹತ್ವ ಮತ್ತು ಶಾಸ್ತ್ರೀಯ ವಿವೇಚನೆ

(Importance of shraddha and its scientific analysis)

ಕನ್ನಡ (Kannada)

**ಸಂಕಲನಕಾರರು**

**ಹಿಂದೂ ರಾಷ್ಟ್ರ ಸ್ಥಾಪನೆಯ ಉದ್ಘೋಷಕರು**

**ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಬಾಳಾಜಿ ಆಠವಲೆ**

**ಪೂ. ಸಂದೀಪ ಗಜಾನನ ಆಳಶಿ**

**ಸನಾತನ ಸಂಸ್ಥೆ**

ಆಗಸ್ಟ್ ೨೦೨೩ ರವರೆಗೆ ಸನಾತನದ ೩೬೨ ಗ್ರಂಥಗಳ ಕನ್ನಡ, ಹಿಂದಿ, ಆಂಗ್ಲ, ಮರಾಠಿ, ಗುಜರಾತಿ, ತಮಿಳು, ತೆಲುಗು, ಮಲಯಾಳಂ, ಬಂಗಾಲಿ, ಒರಿಯಾ, ಗುರುಮುಖಿ, ಅಸ್ಸಾಮಿ, ನೇಪಾಳಿ, ಜರ್ಮನ್, ಸರ್ಬಿಯನ್, ಫ್ರೆಂಚ್ ಮತ್ತು ಸ್ಪ್ಯಾನಿಶ್ ಈ ೧೭ ಭಾಷೆಗಳಲ್ಲಿ ೯೪,೧೮,೦೦೦ ಪ್ರತಿಗಳು !

**ಪ್ರಕಾಶಕರು** : ಶ್ರೀ ಸಿದ್ಧೇಶ್ವರ ಧರ್ಮಜಾಗೃತಿ ಸಂಸ್ಥೆ
Shree Siddheshwar Dharmajagruti Sanstha
ಮ.ಸಂ. 2ಬಿ–29ಎ, ಇಂದಿರಾನಗರ, ಕುಕ್ಕಿಕಟ್ಟೆ,
ಉಡುಪಿ 576 101, ಕರ್ನಾಟಕ. ದೂ.ಕ್ರ. : +91 93424 35617
ಇತರ ದೂ.ಕ್ರ. (ಗೋವಾ) : +91 (0832) 2312664
ಇ–ಅಂಚೆ : granth@sanatan.org

**ಮುಖಪುಟದ ಪರಿಕಲ್ಪನೆ** : ಸೌ. ಯೋಗೇಶ್ರೀ ಘೋಳೆ ಮತ್ತು ಸೌ. ಜಾಹ್ನವಿ ಶಿಂದೆ

ಶ್ರಾದ್ಧ (ಮಹತ್ವ ಮತ್ತು ಶಾಸ್ತ್ರೀಯ ವಿವೇಚನೆ)' ಈ ಮೂಲ ಖಂಡದ (ಮೊದಲ ಆವೃತ್ತಿ : 9.10.2008) ಮೂರು ಆವೃತ್ತಿಗಳು ಪ್ರಕಾಶಿತಗೊಂಡಿವೆ. ಈ ಮೂಲ ಖಂಡವನ್ನು ಮಾರ್ಚ್ 2016 ರಲ್ಲಿ 'ಶ್ರಾದ್ಧದ ಮಹತ್ವ ಮತ್ತು ಶಾಸ್ತ್ರೀಯ ವಿವೇಚನೆ' ಮತ್ತು 'ಶ್ರಾದ್ಧದಲ್ಲಿನ ಕೃತಿಗಳ ಹಿಂದಿನ ಅಧ್ಯಾತ್ಮಶಾಸ್ತ್ರ' ಎಂಬ 2 ಖಂಡಗಳಲ್ಲಿ ವಿಭಜಿಸಲಾಗಿದೆ.

**First Edition** : Durgashtami, Kaliyug Varsh 5117
(16th March 2016)

**Fifth Reprint** : Shri Ganesh Chaturthi, Kaliyug Varsh 5125
(19th September 2023)

Translated from the original Marathi text 'Shraaddhache Mahatva ani Shastriya Vivechan'
ಪ್ರಸ್ತುತ ಗ್ರಂಥವು ಹಿಂದಿ, ಆಂಗ್ಲ, ಗುಜರಾತಿ ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯವಿದೆ.

**ಅನುವಾದಕರು** : ಡಾ. ಪ್ರಕಾಶ ಘಾಳಿ
ಶ್ರೀ. ಗಣೇಶ ರಾಜಾರಾಮ ಕಾಮತ್

**ಮುದ್ರಣಸ್ಥಳ** : ಆಮೋದ್ ಗ್ರಾಫಿಕ್ಸ್, ಬೆಂಗಳೂರು – 560 010.

**ದೇಣಿಗೆ ಮೌಲ್ಯ** : ₹ 125/-

**ISBN** : 978-93-84460-72-3 ॐ ಗ್ರಂಥ ಕ್ರ. : 103

© **ಪ್ರಕಾಶಕರು** All rights are reserved. No part of this publication maybe reproduced, stored in a retrieval system or transmitted, in any form or by any means, mechanical, photocopying, recording or otherwise, without prior written permission of the original publisher. Violators will be liable for criminal / civil action.

## ಗ್ರಂಥದ ಸಂಕಲನಕಾರರ ಪರಿಚಯ

# ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಅದ್ವಿತೀಯ ಕಾರ್ಯ ಮತ್ತು ವೈಶಿಷ್ಟ್ಯಗಳ ಸಂಕ್ಷಿಪ್ತ ಪರಿಚಯ !



೧. ಅಧ್ಯಾತ್ಮಪ್ರಸಾರಕ್ಕಾಗಿ ‘ಸನಾತನ ಸಂಸ್ಥೆ’ಯ ಸ್ಥಾಪನೆ

೨. ಶೀಘ್ರ ಈಶ್ವರಪ್ರಾಪ್ತಿಗಾಗಿ ‘ಗುರುಕೃಪಾಯೋಗ’ ಎಂಬ ಸಾಧನಾಮಾರ್ಗದ ನಿರ್ಮಿತಿ : ಇದಕ್ಕನುಸಾರ ಸಾಧನೆ ಮಾಡಿ ೩.೯.೨೦೨೩ ರವರೆಗೆ ೧೨೫ ಸಾಧಕರು ಸಂತರಾಗಿದ್ದು, ೧,೦೪೬ ಸಾಧಕರು ಸಂತತ್ವದೆಡೆಗೆ ಮಾರ್ಗಕ್ರಮಣ ಮಾಡುತ್ತಿದ್ದಾರೆ.

೩. ಆಚಾರಧರ್ಮಪಾಲನೆ, ದೇವತೆಗಳು, ಸಾಧನೆ, ಆದರ್ಶ ರಾಷ್ಟ್ರನಿರ್ಮಾಣ, ಧರ್ಮರಕ್ಷಣೆ ಇತ್ಯಾದಿ ವಿವಿಧ ವಿಷಯಗಳ ಬಗ್ಗೆ ವಿಪುಲ ಗ್ರಂಥಗಳ ನಿರ್ಮಿತಿ

೪. ಹಿಂದುತ್ವವಾದಿ ವರ್ತಮಾನಪತ್ರಿಕೆ ‘ಸನಾತನ ಪ್ರಭಾತ’ದ ಸಂಸ್ಥಾಪಕ-ಸಂಪಾದಕರು

೫. ಹಿಂದೂ ರಾಷ್ಟ್ರದ (ಈಶ್ವರೀ ರಾಜ್ಯದ) ಸ್ಥಾಪನೆಯ ಉದ್ಘೋಷ (೧೯೯೮)

೬. ಹಿಂದೂ ರಾಷ್ಟ್ರದ ಸ್ಥಾಪನೆಗಾಗಿ ಸಂತರು, ಸಂಪ್ರದಾಯಗಳು, ಹಿಂದುತ್ವವಾದಿಗಳು ಮುಂತಾದವರ ಸಂಘಟನೆ ಹಾಗೂ ಅವರಿಗೆ ಮಾರ್ಗದರ್ಶನ !

**(ಸಂಪೂರ್ಣ ಪರಿಚಯಕ್ಕಾಗಿ ಭೇಟಿ ನೀಡಿ ‘www.Sanatan.org/Kannada’)**

**ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಸಾಧಕರಿಗೆ ನೀಡಿದ ಭರವಸೆ !**

**ಸ್ಥೂಲದೇಹಕ್ಕಿಹುದು ಸ್ಥಳಕಾಲಗಳ ಪರಿಮಿತಿ ।**
**ಹೇಗಿರಲಿ ಸದಾ ಎಲ್ಲ ಕಡೆಗಳಲ್ಲಿ ॥**
**ಸನಾತನ ಧರ್ಮವಿಹುದು ನನ್ನ ನಿತ್ಯರೂಪ ।**
**ಆ ರೂಪದಲ್ಲಿರುವೆ ಎಲ್ಲ ಕಡೆಗಳಲ್ಲಿ ಸದಾ ॥**

Jayant Balaji Athavale
17.5.1996



**ಪೂ. ಸಂದೀಪ ಗಜಾನನ ಆಳಶಿ**

ಸನಾತನದ ಗ್ರಂಥಗಳ ಅಂತಿಮ ಸಂಕಲನಕಾರರು. ರಾಷ್ಟ್ರ ಜಾಗೃತಿ ಮತ್ತು ಧರ್ಮಪ್ರಸಾರ ಮಾಡುವ ಪ್ರಸಾರಸಾಹಿತ್ಯ (ಉದಾ. ಸನಾತನ ಪಂಚಾಂಗ, ಕರಪತ್ರ) ಹಾಗೂ ಸಾಧನೆ, ರಾಷ್ಟ್ರ ಮತ್ತು ಧರ್ಮ ಇವುಗಳಿಗೆ ಸಂಬಂಧಿಸಿದ ವರ್ತಮಾನಪತ್ರಿಕೆ 'ಸನಾತನ ಪ್ರಭಾತ' ದಲ್ಲಿ ಪ್ರಬೋಧನಾತ್ಮಕ ಲೇಖನವನ್ನು ಬರೆಯುತ್ತಾರೆ.

---

## ಗ್ರಂಥದ ಅನುಕ್ರಮಣಿಕೆ

(ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)


೧. 'ಶ್ರಾದ್ಧ' ಈ ಶಬ್ದದ ಸಂದರ್ಭದಲ್ಲಿನ ಮಾಹಿತಿ ೯

೨. 'ಶ್ರಾದ್ಧ'ವೆಂದರೆ 'ಕೃತಜ್ಞತೆಯಿಂದ ಪಿತೃಗಳನ್ನು ಸ್ಮರಿಸುವುದಷ್ಟೇ ಅಲ್ಲ', ಅದೊಂದು ವಿಧಿಯಾಗಿದೆ. ೯

೩. ಶ್ರಾದ್ಧವಿಧಿಯ ಇತಿಹಾಸ ೯

೪. ಇತಿಹಾಸದಲ್ಲಿ ಕ್ರಮದಂತೆ ರೂಢಿಯಲ್ಲಿ ಬಂದ ಶ್ರಾದ್ಧದ ಮೂರು ವಿಧಗಳು ಮತ್ತು ಪ್ರಸ್ತುತ ಕಾಲದ ಶ್ರಾದ್ಧ ೧೦

೫. ಶ್ರಾದ್ಧವನ್ನು ಮಾಡುವ ಉದ್ದೇಶ ೧೦

೬. ಶ್ರಾದ್ಧದ ಮಹತ್ವ ಮತ್ತು ಆವಶ್ಯಕತೆ ೧೧

೭. ಶ್ರಾದ್ಧದಿಂದ ಆಗುವ ಲಾಭಗಳು ೧೯

೮. ಶ್ರಾದ್ಧದ ಪರಿಣಾಮಗಳು ೨೨

೮ ಅ. ಶ್ರಾದ್ಧ ಮಾಡಿದ ನಂತರ ಪಿತೃಗಳಿಗೆ ಸದ್ಗತಿ ದೊರಕುವ ಪ್ರಕ್ರಿಯೆ ೨೨

೮ ಆ. ಶ್ರಾದ್ಧವಿಧಿಗಳಿಂದ ಮೃತಾತ್ಮಗಳ ಸೂಕ್ಷ್ಮದೇಹಗಳ ಮೇಲಾಗುವ ಪರಿಣಾಮ ೨೨

೮ ಇ. ಮೃತ್ಯುವಿನ ನಂತರ ಆತ್ಮಕ್ಕೆ ಪ್ರಾಪ್ತವಾಗುವ ಸೂಕ್ಷ್ಮ-ದೇಹ ಮತ್ತು ಶ್ರಾದ್ಧವಿಧಿಯಿಂದ ಆ ದೇಹದ ಮೇಲಾಗುವ ಪರಿಣಾಮ ೨೨

೯. ಶ್ರಾದ್ಧಕರ್ತನ ಏಳು ಗೋತ್ರಗಳಲ್ಲಿನ ಗತಿ ಸಿಗುವ ೧೦೧ ಕುಲಗಳು ೨೪

೧೦. ಶ್ರಾದ್ಧದ ದೇವತೆ ೨೫

೧೧. ಶ್ರಾದ್ಧಗಳ ವಿಧಗಳು ಮತ್ತು ಅವುಗಳ ಲಾಭ ೨೫

**೧೨. ನಾರಾಯಣಬಲಿ, ನಾಗಬಲಿ ಮತ್ತು ತ್ರಿಪಿಂಡಿ ಶ್ರಾದ್ಧ** ೪೨

**೧೩. ಶ್ರಾದ್ಧದ ಪರಿಭಾಷೆ** ೫೦

೧೩ ಊ. ಜನಿವಾರವನ್ನು ಧರಿಸುವ ಮೂರು ವಿಧಗಳು ೫೧

* ಶ್ರಾದ್ಧದಲ್ಲಿ ರಂಗೋಲಿಯನ್ನು ಭಸ್ಮದಿಂದ ಏಕೆ ಹಾಕಬೇಕು ? ೫೨

**೧೪. ತರ್ಪಣ ಮತ್ತು ಪಿತೃತರ್ಪಣ** ೫೨

**೧೫. ಶ್ರಾದ್ಧವನ್ನು ಯಾರು ಮಾಡಬೇಕು ?** ೫೬

೧೫ ಇ. ಇಂತಹ ಒಬ್ಬ ವ್ಯಕ್ತಿಯು ಶ್ರಾದ್ಧವಿಧಿಯನ್ನು ಮಾಡಬಾರದೆಂದು ಮಾಡಲಿಲ್ಲ ಎಂದು ಯಾರಿಗೂ ಹೇಳಲು ಅವಕಾಶ ನೀಡದ ಹಿಂದೂ ಧರ್ಮ ! ೫೮

**೧೬. ಶ್ರಾದ್ಧವನ್ನು ಯಾವಾಗ ಮಾಡಬೇಕು ?** ೫೯

೧೬ ಆ. ಮೃತ್ಯುತಿಥಿ ಗೊತ್ತಿಲ್ಲದಿದ್ದರೆ ಯಾವಾಗ ಶ್ರಾದ್ಧ ಮಾಡಬೇಕು ? ೬೦

೧೬ ಊ. ಶ್ರಾದ್ಧದ ವಿಧಗಳಿಗನುಸಾರ ಶ್ರಾದ್ಧ ಕಾಲ ೬೭

**೧೭. ಶ್ರಾದ್ಧವನ್ನು ಎಲ್ಲಿ ಮಾಡಬೇಕು ?** ೭೧

**೧೮. ಶ್ರಾದ್ಧದ ಸಿದ್ಧತೆ** ೭೪

**卐 ಶ್ರಾದ್ಧ ವಿಧಿಗಳ ಬಗ್ಗೆ ಟೀಕಾತ್ಮಕ ವಿಚಾರಗಳು ಮತ್ತು ಅವುಗಳ ಖಂಡನೆ** ೯೩

**卐 ಆಧ್ಯಾತ್ಮಿಕ ಪರಿಭಾಷೆಯಲ್ಲಿನ ವೈಶಿಷ್ಟ್ಯಪೂರ್ಣ ಪ್ರಸ್ತಾವನೆ !** ೯೭

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ** ೯೯


## ಪರಾತ್ಪರ ಗುರು ಡಾ. ಜಯಂತ ಆಠವಲೆಯವರ 'ಸಚ್ಚಿದಾನಂದ ಪರಬ್ರಹ್ಮ' ಎಂಬ ಬಿರುದಿನ ಕುರಿತಾದ ವಿವೇಚನೆ !

೧೩.೭.೨೦೨೨ ರಿಂದ 'ಸಪ್ತರ್ಷಿ ಜೀವನಾಡಿಪಟ್ಟಿ'ಯ ವಾಚನದ ಮಾಧ್ಯಮದಿಂದ ಸಪ್ತರ್ಷಿಗಳ ಆಜ್ಞೆಯಂತೆ ಪರಾತ್ಪರ ಗುರು ಡಾ. ಆಠವಲೆಯವರನ್ನು 'ಸಚ್ಚಿದಾನಂದ ಪರಬ್ರಹ್ಮ' ಎಂದು ಸಂಬೋಧಿಸಲಾಗುತ್ತಿದೆ. ಇದಕ್ಕೂ ಮೊದಲು ಗ್ರಂಥಗಳಲ್ಲಿ ಅವರನ್ನು 'ಪ.ಪೂ. [ಪರಮ ಪೂಜ್ಯ]' ಮತ್ತು 'ಪರಾತ್ಪರ ಗುರು' ಎಂಬ ಬಿರುದುಗಳಿಂದ ಸಂಬೋಧಿಸಲಾಗಿದೆ. ಇದಕ್ಕನುಸಾರ ಪ್ರಸ್ತುತ ಗ್ರಂಥದ ಮುಖಪುಟದಲ್ಲಿ ಮತ್ತು ಗ್ರಂಥದಲ್ಲಿ ಆವಶ್ಯಕವಿರುವ ಕಡೆ ಹೀಗೆ ಉಲ್ಲೇಖಿಸಲಾಗಿದೆ.

## ಮನೋಗತ

'ಶ್ರಾದ್ಧ' ಎಂದು ಹೇಳಿದೊಡನೆ ಇಂದಿನ ವಿಜ್ಞಾನಯುಗದ ಯುವಪೀಳಿಗೆಯ ಮನಸ್ಸಿನಲ್ಲಿ 'ಅಶಾಸ್ತ್ರೀಯ ಮತ್ತು ಅವಾಸ್ತವ ಕರ್ಮಕಾಂಡದ ಆಡಂಬರ' ಎಂಬ ತಪ್ಪುಕಲ್ಪನೆ ಮೂಡುತ್ತದೆ. ಧರ್ಮಶಿಕ್ಷಣದ ಅಭಾವ, ಅಧ್ಯಾತ್ಮವನ್ನು ಅರ್ಥಮಾಡಿಕೊಳ್ಳುವಲ್ಲಿನ ಅನಾಸಕ್ತಿ, ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ, ಧರ್ಮವಿರೋಧಿ ಸಂಘಟನೆಗಳಿಂದ ಹಿಂದೂ ಧರ್ಮದ ರೂಢಿ-ಪರಂಪರೆಗಳ ಮೇಲೆ ಸತತವಾಗಿ ಆಗುತ್ತಿರುವ ದ್ವೇಷಪೂರ್ವಕ ಟೀಕೆ ಇತ್ಯಾದಿಗಳಿಂದ ಈ ಪರಿಣಾಮವಾಗಿದೆ. ಶ್ರಾದ್ಧದ ವಿಷಯದಲ್ಲಿ ಮುಂದಿನ ವಿಚಾರಸರಣಿಯು ಸಮಾಜದಲ್ಲಿ ಕಂಡುಬರುತ್ತದೆ. ಪೂಜೆ ಅರ್ಚನೆ, ಶ್ರಾದ್ಧಪಕ್ಷ ಮುಂತಾದವುಗಳ ಮೇಲೆ ವಿಶ್ವಾಸವನ್ನಿಡದ ಅಥವಾ ಸಮಾಜಕಾರ್ಯವೇ ಸರ್ವ ಶ್ರೇಷ್ಠವಾಗಿದೆ ಎಂದು ಹೇಳುವವರು ಪಿತೃಗಳಿಗಾಗಿ ಶ್ರಾದ್ಧವಿಧಿಗಳನ್ನು ಮಾಡದೇ ಅದರ ಬದಲು, 'ಬಡವರಿಗೆ ಅನ್ನದಾನ ಮಾಡುವೆವು ಅಥವಾ ಶಾಲೆಗಳಿಗೆ ಸಹಾಯ ಮಾಡುವೆವು' ಎಂದು ಹೇಳುತ್ತಾರೆ ! ಅನೇಕ ಜನರು ಇದೇ ರೀತಿ ಮಾಡುತ್ತಾರೆ ! ಹೀಗೆ ಮಾಡುವುದೆಂದರೆ, 'ಒಬ್ಬ ರೋಗಿಗೆ ಶಸ್ತ್ರಚಿಕಿತ್ಸೆ ಮಾಡದೇ, ಅದರ ಬದಲು ನಾವು ಬಡವರಿಗೆ ಅನ್ನದಾನ ಮಾಡುವೆವು, ಶಾಲೆಗೆ ಸಹಾಯ ಮಾಡುವೆವು' ಎಂದು ಹೇಳಿದಂತೆಯೇ ಆಗಿದೆ. ಶ್ರಾದ್ಧದಲ್ಲಿನ ಮಂತ್ರೋಚ್ಚಾರಗಳಲ್ಲಿ ಪಿತೃಗಳಿಗೆ ಗತಿ ನೀಡುವಂತಹ ಸೂಕ್ಷ್ಮಶಕ್ತಿಯು ಒಳಗೊಂಡಿರುತ್ತದೆ; ಅದರಿಂದಾಗಿ ಪಿತೃಗಳಿಗೆ ಗತಿ ಸಿಗಲು ಸಾಧ್ಯವಾಗುತ್ತದೆ. ಹಾಗಾಗಿ ಮೇಲಿನ ಹೇಳಿಕೆಗಳು ಹಾಸ್ಯಾಸ್ಪದವೆನಿಸಿಕೊಳ್ಳುತ್ತವೆ. ಮೇಲಿನಂತಹ ವಿಚಾರಸರಣಿಯಿರುವ ವ್ಯಕ್ತಿಗಳ ಕಣ್ಣಮುಂದಿರುವ ಅಜ್ಞಾನ ಮತ್ತು ಅಂಧವಿಶ್ವಾಸಗಳ ಪರದೆಯನ್ನು ದೂರ ಸರಿಸಿ, ಅವರಿಗೆ 'ಶ್ರಾದ್ಧ'ವು ಹಿಂದೂ ಧರ್ಮದ ಪವಿತ್ರ ಸಂಸ್ಕಾರವಾಗಿದೆ ಎಂಬ ಸಕಾರಾತ್ಮಕ ಮತ್ತು ಅಧ್ಯಾತ್ಮಶಾಸ್ತ್ರೀಯ ದೃಷ್ಟಿಯು ಲಭಿಸಲಿ ಎಂಬ ಮುಖ್ಯ ಉದ್ದೇಶವನ್ನಿಟ್ಟುಕೊಂಡು ಈ ಗ್ರಂಥವನ್ನು ಪ್ರಕಾಶಿಸಲಾಗಿದೆ.

ಭಾರತೀಯ ಸಂಸ್ಕೃತಿಯು ಹೇಳುವುದೇನೆಂದರೆ, ಹೇಗೆ ತಂದೆ-ತಾಯಿ ಹಾಗೂ ಸಂಬಂಧಿಕರ ಅಸಹಾಯಕ ಸ್ಥಿತಿಯಲ್ಲಿ ಅವರ ಸೇವೆ-ಶುಶ್ರೂಷೆಗಳನ್ನು ನಾವು ಧರ್ಮಪಾಲನೆ ಎಂದೇ ಮಾಡುತ್ತೇವೆಯೋ, ಅದೇ ರೀತಿ ಮೃತ್ಯುವಿನ ನಂತರವೂ ಅವರ ಬಗ್ಗೆ ನಮಗೆ ಕೆಲವೊಂದು ಕರ್ತವ್ಯಗಳಿರುತ್ತವೆ. ಆ ಕರ್ತವ್ಯಪೂರ್ತಿಯ ಮತ್ತು ಅದರ ಮೂಲಕ ಪಿತೃಋಣವನ್ನು ತೀರಿಸುವ ಸದವಕಾಶವು ಶ್ರಾದ್ಧಕರ್ಮದಿಂದ ಸಿಗುತ್ತದೆ. ಚಿಕ್ಕಂದಿನಲ್ಲಿ ಅಂಗೈಯಲ್ಲಿಟ್ಟು ಮುದ್ದಿನಿಂದ ನಮ್ಮನ್ನು ಜೋಪಾಸನೆ ಮಾಡಿದ ಮಾತಾಪಿತರ ಮೃತ್ಯೋತ್ತರ ಪ್ರವಾಸವು ಸುಖಮಯ ಮತ್ತು ಕ್ಲೇಶರಹಿತವಾಗಬೇಕು, ಅವರಿಗೆ ಸದ್ಗತಿ ಸಿಗಬೇಕು ಎಂಬುದಕ್ಕಾಗಿ ಶ್ರಾದ್ಧವಿಧಿಯು ಅವಶ್ಯವಾಗಿರುತ್ತದೆ. ಶ್ರಾದ್ಧ

ಮಾಡದೇ ಇದ್ದಲ್ಲಿ ಪಿತೃಗಳ ಇಚ್ಛೆಗಳು ಅತೃಪ್ತವಾಗಿ ಉಳಿಯುವುದರಿಂದ, ಹಾಗೆಯೇ ಇಂತಹ ವಾಸನಾಯುಕ್ತ ಪಿತೃಗಳು ಕೆಟ್ಟ ಶಕ್ತಿಗಳ ಹಿಡಿತಕ್ಕೆ ಸಿಲುಕಿ ಅವರ ಗುಲಾಮರಾಗುವುದರಿಂದ ಕೆಟ್ಟ ಶಕ್ತಿಗಳು ಪಿತೃಗಳನ್ನು ಉಪಯೋಗಿಸಿ ಕುಟುಂಬದವರಿಗೆ ತೊಂದರೆ ನೀಡುವ ಸಾಧ್ಯತೆಯು ಹೆಚ್ಚು ಇರುತ್ತದೆ. ಶ್ರಾದ್ಧವಿಧಿಯಿಂದಾಗಿ ಪಿತೃಗಳು ಈ ತೊಂದರೆಗಳಿಂದ ಮುಕ್ತಿ ಹೊಂದಿದಾಗ ನಮ್ಮ ಜೀವನವೂ ಸುಖಮಯವಾಗುತ್ತದೆ. ವಿಶಿಷ್ಟ ವಾರ, ತಿಥಿ, ನಕ್ಷತ್ರಗಳಲ್ಲಿ ಶ್ರಾದ್ಧ ಮಾಡುವುದರಿಂದ ಪಿತೃಕರ್ಮ ಆಗುವುದರ ಜೊತೆಗೆ ವಿಶಿಷ್ಟ ಫಲಪ್ರಾಪ್ತಿಯೂ ಆಗುತ್ತದೆ. ಇಂತಹ ವಿಭಿನ್ನ ದೃಷ್ಟಿಕೋನಗಳ ಮೂಲಕ ಶ್ರಾದ್ಧದ ಮಹತ್ವ ಮತ್ತು ಲಾಭಗಳನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ.

ಇದರೊಂದಿಗೆ ನಾಂದಿ, ಮಹಾಲಯ, ಭರಣಿ, ತ್ರಿಪಿಂಡಿ ಮುಂತಾದ ಶ್ರಾದ್ಧಗಳ ವಿವಿಧ ಪ್ರಕಾರಗಳು, ಶ್ರಾದ್ಧವನ್ನು ಯಾರು ಮಾಡಬೇಕು, ಶ್ರಾದ್ಧವನ್ನು ಯಾವಾಗ ಮತ್ತು ಎಲ್ಲಿ ಮಾಡಬೇಕು, ಶ್ರಾದ್ಧಕ್ಕಾಗಿ ಯೋಗ್ಯ ಬ್ರಾಹ್ಮಣರು ಸಿಗದೇ ಇದ್ದಲ್ಲಿ ಏನು ಮಾಡಬೇಕು, ಶ್ರಾದ್ಧದ ಅಡುಗೆಯಲ್ಲಿರಬೇಕಾದ ಆವಶ್ಯಕವಾದ ಪದಾರ್ಥಗಳು ಯಾವುವು, ಶ್ರಾದ್ಧಕರ್ತಾ ಮತ್ತು ಶ್ರಾದ್ಧಭೋಕ್ತಾ ಇವರಿಗಿರುವ ವಿಧಿನಿಷೇಧಗಳೇನು, ಶ್ರಾದ್ಧ ಪ್ರಯೋಗ ಹೇಗಿರುತ್ತದೆ, ಪಿತೃಗಳಿಗೆ ಮತ್ತು ದೇವರಿಗೆ ಅನ್ನ ನಿವೇದನೆ ಮಾಡುವ ಪದ್ಧತಿ ಯಾವುದು, ಶ್ರಾದ್ಧ ಮಾಡುವಲ್ಲಿ ಅಡಚಣೆ ಬಂದರೆ ಅದನ್ನು ಹೇಗೆ ದೂರಗೊಳಿಸುವುದು ಮುಂತಾದ ಉಪಯುಕ್ತ ಮಾಹಿತಿಯನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ. ಶ್ರಾದ್ಧದಲ್ಲಿ ಬ್ರಾಹ್ಮಣರಿಗೆ ನೀಡಿದ ಅನ್ನವು ಪಿತೃಗಳಿಗೆ ಹೇಗೆ ತಲುಪುತ್ತದೆ, ಕಾಗೆಯು ಪಿಂಡವನ್ನು ಮುಟ್ಟುವುದರ ಹಿಂದಿನ ಶಾಸ್ತ್ರವೇನು ಮುಂತಾದ ಸರ್ವಸಾಮಾನ್ಯರನ್ನು ಕಾಡುವ ಸಂದೇಹಗಳ ನಿವಾರಣೆಯನ್ನು ಈ ಗ್ರಂಥದಲ್ಲಿ ಮಾಡಲಾಗಿದೆ.

ಈ ಗ್ರಂಥದ ಅಧ್ಯಯನದಿಂದ ನಮ್ಮ ಮಹಾನ್ ಋಷಿಮುನಿಗಳು ನೀಡಿದ 'ಶ್ರಾದ್ಧ'ರೂಪಿ ಅಮೂಲ್ಯ ಸಂಸ್ಕೃತಿಯ ಪರಂಪರೆಯನ್ನು ಜೋಪಾಸನೆ ಮಾಡುವ ಸದ್ಬುದ್ಧಿಯು ಎಲ್ಲರಿಗೂ ಲಭಿಸಲಿ, ಅದೇ ರೀತಿ ಶ್ರಾದ್ಧವಿಧಿಗಳನ್ನು ಶ್ರದ್ಧೆಯಿಂದ ಮಾಡುವಂತಾಗಿ ನಮ್ಮ ಪೂರ್ವಜರ ಹಾಗೂ ಸ್ವಂತದ ಉನ್ನತಿಯು ಆಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – **ಸಂಕಲನಕಾರರು**

**ವಾಚಕರಿಗೆ ಸೂಚನೆ !**

'ಈ ಗ್ರಂಥದಲ್ಲಿನ ಸೂಕ್ಷ್ಮ ಪರೀಕ್ಷಣೆ, ಸೂಕ್ಷ್ಮಜ್ಞಾನದ ಚಿತ್ರಗಳನ್ನು 'ಮಹರ್ಷಿ ಅಧ್ಯಾತ್ಮ ವಿಶ್ವವಿದ್ಯಾಲಯ'ದ ಸೌಜನ್ಯದಿಂದ ತೆಗೆದುಕೊಳ್ಳಲಾಗಿದೆ.' – **ಪ್ರಕಾಶಕರು**